ಮರಗಳನ್ನೇ ದಿಟ್ಟಿಸಿದೆ.

ಶ್ರಾವಣ ಮಾಸ, ನಿತ್ಯ ಮಳೆ. ಸಂಜೆಯಾದರೆ ಸದ್ದುಗದ್ದಲದೊಂದಿಗೆ ಶುರುವಾಗಿ ಒಂದೇ ಸಮನೆ ಸುರಿದು ಇಳೆಯನ್ನು ತೋಯಿಸುವ ಮಳೆ. ಮಳೆಯಿಂದಾಗಿ ಮರದ ಎಲೆಗಳೆಲ್ಲಾ ಮೈ ತೊಳೆದು ಶುಭ್ರವಾಗಿ ಕಳಕಳಿಸುತ್ತಿದ್ದವು. ಬೆಳಗಿನ ಸೂರ್ಯಕಿರಣಗಳು ಅವುಗಳ ಮೇಲೆ ಬಿದ್ದು ಫಳ ಫಳ ಹೊಳಪು.

ಬೇರು ಬಿಟ್ಟು ನಿಂತಿರುವ ಮರ ನನ್ನ ಮಟ್ಟಿಗೆ ಸ್ಥಿರವೇ; ನಾನು ಮುಂದೆ ಹೋದಂತೆ ಅದು ಹಿಂದೆ ಹೋಗುವ ಚಲನೆ ನನ್ನ ಭ್ರಮೆ. ನನ್ನ ಚಲನೆಯ ವೇಗ ನನ್ನ ಭ್ರಮೆಯನ್ನು ಪುಷ್ಟೀಕರಿಸುತ್ತದೆ, ವೈಭವೀಕರಿಸುತ್ತದೆ.

'ಮುಂದೆ ಯು ಟರ್ನ್ ಇದ್ರೆ ತೊಗೊಂಡು ವಾಪಸ್ ಹೋಗೋಣ. ವೃದ್ಧಾಶ್ರಮಕ್ಕೆ ಬೇಡ...' ಹೇಳಿದೆ.

'ಅಮ್ಮಾ...'

'ಸೌಮ್ಯ ಹೇಳಿದ ಹಾಗೆ ಆಕೆ ರತ್ನತ್ತೆಯೇ ಇರಬಹುದು. ಸುನೀತಾ, ರಾಘು... ಇಬ್ಬರ ಸ್ವಭಾವವೂ ಗೊತ್ತು ನನಗೆ. ನಿಜ, ಆಕೆ ರತ್ನತ್ತೆಯೇ. ನಿಮ್ಮ ಅಪ್ಪ ಹೇಳಿದ ಹಾಗೆ ನಾವು ಹೋಗಿ ಅದು ಅವರೇ ಎಂದು ತಿಳಿದುಕೊಂಡು ಮಾಡುವುದೇನು? ಅವರ ಎದುರಿಗೆ ಹೋಗಿ ನಿಂತು ಅವರಿಗೆ ಇರಿಸುಮುರಿಸು ಮಾಡುವುದರಿಂದ ನಮಗೆ ದಕ್ಕುವುದು ಏನು? ನಮ್ಮನ್ನು ಸಂಪರ್ಕಿಸಬೇಕು ಎಂದಿದ್ದರೆ ಸುನೀತಾಗಾಗಲೀ ರತ್ನತ್ತೆಗಾಗಲೀ ಕಷ್ಟವಿಲ್ಲ. ಅಮ್ಮನಿಗೆ ಒಂದು ಕರೆ ಮಾಡಿದ್ದರೂ ಆಗುತ್ತಿತ್ತು. ಬೇಡ ಅವರಿಗೆ. ಅವರು ಪಡೆದುಕೊಂಡು ಬಂದಿದ್ದು ಅವರು ಅನುಭವಿಸುತ್ತಾರೆ. ಹೋಗಿ ನೋಯಿಸುವುದರಲ್ಲಿ ಅರ್ಥವೇ ಇಲ್ಲ. ಹೋಗೋದು ಬೇಡ ಕಣೋ...' ಕಣ್ಣು ಮುಚ್ಚಿ ಸೀಟಿಗೊರಗಿದೆ.

'ಅಲ್ಲಾ ಅಮ್ಮ...'

'ವಿವೇಕ್! ಅತ್ತೆ ಬೇಡ ಅಂದ ಮೇಲೆ ಬೇಡ. ಪ್ಲೀಸ್ ಡೋಂಟ್ ಫೋರ್ಸ್ ಹರ್!... ಅತ್ತೆ... ಇನ್ನೆರಡು ಕಿಲೋಮೀಟರ್ ಮುಂದೆ ಹೋದರೆ, ಪುಟ್ಟ ಗುಡ್ಡದ ಮೇಲೆ ಒಂದು ದೇವಸ್ಥಾನ ಇದೆ. ಅಲ್ಲಿಗೆ ಹೋಗಣ್ವಾ?'

ತಲೆಯಾಡಿಸಿದೆ. ತಲೆ ಆಡಿಸಿದ್ದಕ್ಕೆ ಇರಬೇಕು. ಕಂಗಳಲ್ಲಿ ತುಂಬಿಕೊಂಡಿದ್ದ ಕಂಬನಿ ಕೆನ್ನಗೆ ಜಾರಿತು.

## ಗೀತಾ ಬಿ.ಯು.

ಲೇಖಕಿ, ಕತೆಗಾರ್ತಿ ಗೀತಾ ಬೆಂಗಳೂರಿನವರು. 'ಮರೀಚಿಕೆ', 'ವಾರಸುದಾರ', 'ಮಿಥ್ಯ', 'ಆರದಿರಲಿ ಬೆಳಕು', 'ಅದೇ ಏಕಾಂತ', 'ಕಟ್ಟಿಕೊಂಡ ಬುತ್ತಿ' ಸೇರಿದಂತೆ ಒಟ್ಟು 16 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. ಕಾರ್ಯಕ್ರಮ ನಿರೂಪಕಿ ಕೂಡ. ಪತ್ರಿಕೆಗಳಿಗೆ ಸಕಾಲಿಕ ಲೇಖನಗಳನ್ನು ಬರೆಯುವುದು ಅವರ ಹವ್ಯಾಸ. ಕಾದಂಬರಿ, ಪ್ರಬಂಧ, ಲೇಖನ, ಕತೆ, ಅತಿ ಸಣ್ಣಕತೆಗಳನ್ನು ಬರೆದಿದ್ದಾರೆ.